ಯಾರು ಎಷ್ಟೇ ಬುದ್ಧಿವಂತರಿದ್ದರೂ ಅವರಿಗಿಂತ ಬುದ್ಧಿವಂತರು ಇರುತ್ತಾರೆ. ಹಾಗೆಯೇ ಕಾಗೆ ಬುದ್ಧಿವಂತ ಹಕ್ಕಿ ಎಂದು ಹೇಳಿದರೂ ತನ್ನ ಗಾನದಿಂದ ಪ್ರಸಿದ್ಧವಾಗಿರುವ ಕೋಗಿಲೆಯಿಂದ ಅದು ಮೋಸ ಹೋಗುತ್ತದೆ. ಕೋಗಿಲೆ ಮೊಟ್ಟೆ ಇಡುವ ಸಂದರ್ಭದಲ್ಲಿ ಕಾಗೆಯ ಗೂಡನ್ನು ಆರಿಸಿಕೊಳ್ಳುತ್ತದೆ. ಕಾಗೆ ಗೂಡಿನಿಂದ ಹೊರಹೋಗಿರುವಾಗ ಮೆಲ್ಲಗೆ ಕಳ್ಳನಂತೆ ಬಂದು ಆ ಗೂಡಿನಲ್ಲಿ ಮೊಟ್ಟೆ ಇಟ್ಟುಬಿಡುತ್ತದೆ.

ಒಂದು ವೇಳೆ ಗೂಡಿನಲ್ಲಿ ಮೊಟ್ಟೆಯಿಡಲು ಜಾಗವಿಲ್ಲದಿದ್ದರೆ ಕಾಗೆಯ ಒಂದೆರಡು ಮೊಟ್ಟೆಗಳನ್ನು ಹೊರಗೆ ಬೀಳಿಸಿ, ಜಾಗ

ಮಾಡಿಕೊಂಡು ತನ್ನ ಮೊಟ್ಟೆಗಳನ್ನಿಟ್ಟುಬಿಡುತ್ತದೆ! ಪಾಪ, ಕಾಗೆ... ಕೋಗಿಲೆಯ ಮೊಟ್ಟೆಗಳನ್ನು ತನ್ನದೇ ಎಂದುಕೊಂಡು ತನ್ನ ಮೊಟ್ಟೆಗಳೊಡನೆ ಅವುಗಳಿಗೂ ಕಾವು ಕೊಟ್ಟು ಮರಿ ಮಾಡಿ, ಆಹಾರವನ್ನೂ ನೀಡುತ್ತದೆ. ರೆಕ್ಕೆ ಬಲಿತ ಕೋಗಿಲೆ ಮರಿಗಳು ಒಂದು ದಿನ ಗೂಡು ಬಿಟ್ಟು ಹಾರಿಹೋಗುತ್ತವೆ. ಹೀಗಾಗಿಯೇ ಕೋಗಿಲೆಯನ್ನು 'ಪರಪುಟ್ಟ' ಎನ್ನುವುದು. ಅಷ್ಟು ಚೆಂದಾಗಿ ಹಾಡುವ ಕೋಗಿಲೆ ಈ ರೀತಿ ಕಾಗೆಗೆ ಮೋಸ ಮಾಡುತ್ತದೆಯಲ್ಲಾ ಎಂದು ನಾವೆಲ್ಲ ಚಿಕ್ಕಂದಿನಲ್ಲಿ ಕೋಗಿಲೆಗೆ ಹಿಡಿಶಾಪ ಹಾಕುತ್ತಿದ್ದೆವು. ತಮಾಷೆ ನೋಡಿ, ಕಾಗೆ ಗುಬ್ಬಚ್ಚಿಗೆ ಮೋಸ ಮಾಡಿದಾಗ ಕಾಗೆಯನ್ನು ಬೈಯುತ್ತಿದ್ದ ನಾವು ಕೋಗಿಲೆ ಕಾಗೆಗೆ ಮಾಡುವ ಮೋಸವನ್ನು ತಿಳಿದು ಕೋಗಿಲೆಯನ್ನು ಬೈಯುತ್ತಿದ್ದೆವು. ಮೋಸ ಮಾಡುವ ಯಾರೇ ಆದರೂ ಆ ನಮ್ಮ ಎಳೆಬುದ್ಧಿಗಂತೂ ಕ್ಷಮಾರ್ಹರಾಗಿರಲಿಲ್ಲ

ಬೆಳಗ್ಗೆ ಯಾರಾದರೊಬ್ಬರ ಮನೆಯ ಮಾಡಿನ (ಛಾವಣಿ) ಮೇಲೆ ಕಾಗೆಯೊಂದು ಕುಳಿತು 'ಕಾವ್...ಕಾವ್...' ಎಂದು ಕೂಗಿದರೆ ಆ ದಿನ ಮನೆಗೆ ಯಾರೋ ನೆಂಟರು ಬರುತ್ತಾರೆ ಎಂದು ಹಿರಿಯರು ಹೇಳುತ್ತಿದ್ದರು. ಚಿಕ್ಕಂದಿನಲ್ಲಿ ನಾವೆಲ್ಲಾ ಓರಿಗೆಯವರು ಸೇರಿ ಚಪ್ಪಾಳೆ ತಟ್ಟುತ್ತಾ ಹೇಳುತ್ತಿದ್ದ, 'ಕಾಗೆ ಕಾಗೆ ಕವ್ವಾ / ಯಾರು ಬರ್ತಾರವ್ವಾ? / ಮಾವ ಬರ್ತಾನವ್ವ / ಮಾವಂಗೇನೂಟ? / ಬೀಸೋಕಲ್ಲಿನ ಗೂಟ / ಮಾವ ಮಾವ ಮಾತಾಡು / ಮಾವಿನ ಮರಕ್ಕೆ ನೇತಾಡು / ಮಾವಿನ ಟೊಂಗೆ ಮುರೀತು / ಮಾವನ ಪ್ಯಾಂಟ್ ಹರೀತು' ಎಂಬ ಈ ಶಿಶುಪದ್ಯ ನಮಗೆಲ್ಲಾ ಅಚ್ಚುಮೆಚ್ಚಿನದಾಗಿತ್ತು. ಒಮ್ಮೆ ನಾವು ಇದನ್ನು ಹಾಡುವ ಸಮಯದಲ್ಲಿ ನಮ್ಮ ಸಂಬಂಧಿಕರಲ್ಲಿ ಮಾವ ಒಬ್ಬರು ಮನೆಗೆ ಬಂದಿದ್ದರು. ನಮಗೆ ಅವರ ಕಡೆ ಗಮನವೇ ಇರದೆ ಖುಷಿಯಾಗಿ ಹಾಡಿಕೊಳ್ಳುತ್ತಿದ್ದೆವು. ಹಾಡಿನ ಕೊನೆಯ ಸಾಲನ್ನು ಹೇಳಿ ನಾವೆಲ್ಲಾ 'ಗೊಳ್' ಎಂದು ನಕ್ಕು ಈಚೆ ತಿರುಗಿದಾಗ ಆ ಮಾವ ಮುಜುಗರದಿಂದ ದೃಷ್ಟಿ ತಪ್ಪಿಸಿದ್ದನ್ನು ಕಂಡು ನಾವು ಅಲ್ಲಿ ನಿಲ್ಲದೆ ಹೊರಗೋಡಿದ್ದೆವು. ಮತ್ತ್ಯಾವತ್ತಾದರೂ ಆ ಮಾವ ಬಂದರೆ ಅವರು ಮಾವಿನ ಮರದ ಟೊಂಗೆಗೆ ನೇತುಬಿದ್ದು, ಅದು ಮುರಿದು, ಅವರ ಪ್ಯಾಂಟ್ ಹರಿದು, ಹರಿದ ಪ್ಯಾಂಟಿನ ಭಾಗವನ್ನು ಮುಚ್ಚಿಕೊಂಡು ಅತ್ತಿತ್ತ ನೋಡದೆ ಮನೆಯೊಳಗೆ ತಲೆತಗ್ಗಿಸಿ ಹೋಗುವುದನ್ನು ಕಲ್ಪಿಸಿಕೊಂಡರೆ ನಗು ಬರುತ್ತಿತ್ತು.

ಎಲ್ಲಾ ಪಕ್ಷಿಗಳಂತೆ ಕಾಗೆಗೆ ಬಣ್ಣ ಬಣ್ಣದ ರೆಕ್ಕೆಗಳಿಲ್ಲ. ಅದರದು ಇದ್ದಿಲಿನಂತೆ ಕಡುಕಪ್ಪು ಬಣ್ಣ. ಅದೂ ಒಂಥರಾ ಚೆಂದವೇ! ಒಂದು ಸಲ ಕಾಗೆಗೆ ತನ್ನ ಬಣ್ಣದ ಬಗ್ಗೆ, ರೂಪದ ಬಗ್ಗೆ ಬೇಸರ ಹುಟ್ಟಿತಂತೆ. ಏನಾದರೂ ಮಾಡಿ ತಾನೂ ಸುಂದರವಾಗಿ ಕಾಣಬೇಕು ಎಂದು ಅಲ್ಲೇ ಬಿದ್ದಿದ್ದ ನವಿಲಿನ ಪುಕ್ಕವನ್ನು ಸಿಕ್ಕಿಸಿಕೊಂಡಿತು, ಹುಂಜದ ಜುಟ್ಟನ್ನು ತಲೆಯ ಮೇಲೆ ಅಂಟಿಸಿಕೊಂಡಿತು, ಕೊಕ್ಕಿಗೆ ಬಣ್ಣವನ್ನು ಹಚ್ಚಿಕೊಂಡಿತು. ಕೋಗಿಲೆಯಂತೆ ಕೂಗಲು ಪ್ರಯತ್ನಿಸಿತು. ಹೀಗೆಲ್ಲಾ ವೇಷ ಮಾಡಿಕೊಂಡು ಒಯ್ಯಾರದಿಂದ ಹೋಗುತ್ತಿರುವಾಗ ಈ ವಿಚಿತ್ರ ಪ್ರಾಣಿ(ಪಕ್ಷಿ)ಯನ್ನು ನೋಡಿ ವನಚರಗಳೆಲ್ಲಾ ನಕ್ಕವು. ಊರಿಗೆ ಬಂದರೆ ನಾಯಿಗಳು ಅಟ್ಟಿಸಿಕೊಂಡು ಬಂದವು. 'ಇದೆಲ್ಲಾ ಬೇಡ,